# ಗತಿ–ಸುಗತಿ

ಮಾನವ ಜೀವನವು ಬಲು ಸಂಕೀರ್ಣವಾದುದು. ಈ ಸಂಕೀರ್ಣತೆಯ ಸ್ವರೂಪವನ್ನು ತಿಳಿಯಲು ನಮ್ಮ ಮಹಾಕಾವ್ಯಗಳ ಕಡೆಗೂ ಶಾಸ್ತ್ರಸಾಹಿತ್ಯದ ಕಡೆಗೂ ತುಸು ಕಣ್ಣು ಹಾಯಿಸಬಹುದು. ಸಂಸ್ಕೃತದಲ್ಲಿ 'ಗತಿ–ಸುಗತಿ' ಎಂಬೆರಡು ಪರಿಕಲ್ಪನೆಯ ಮಾತುಗಳಿವೆ. ಈ ಮಾತುಗಳ ಸ್ವರೂಪವನ್ನು ಮೊದಲಿಗೆ ತಿಳಿಯೋಣ. ನಮ್ಮ ಬಾಳ್ವೆಯನ್ನು ತಿಳಿಯಲು ನಾವು ಸನ್ನಿವೇಶಗಳ ಮೂಲಕವೋ ಸಾಂಸ್ಕೃತಿಕ ಪದಕಲ್ಪನೆಗಳ ಮೂಲಕವೋ ಪ್ರಯತ್ನಿಸುತ್ತೇವೆ. ನಮ್ಮ ಪೂರ್ವಿಕರು ಈ ಎರಡೂ ಬಗೆಯ ಸಾಧನಗಳನ್ನು ಬಳಸುತ್ತಿದ್ದರು. ಕನ್ನಡದಲ್ಲೂ ಇದೇ ವಿವಕ್ಷೆ ಉಂಟು. ನಾವು 'ಗತಿ' ಎಂದು ವ್ಯಾವಹಾರಿಕವಾಗಿ ಬಳಸುತ್ತೇವೆ. 'ನಿನಗೊಂದು ಗತಿ ಕಾಣಿಸೋದೆ ಸರಿ' ಎಂಬ ಮಾತನ್ನು ಆಡುತ್ತೇವೆ. ಗತಿ ಎಂಬ ಮಾತಿಗೆ ಹಲವು ಅರ್ಥಗಳಿವೆ. ಸಂಚಾರ, ವಿಷಯ, ಅವಸ್ಥೆ, ಕಾರ್ಯಸಾಧನೆಯ ಯುಕ್ತಿ, ಮಾರ್ಗ, ಆಶ್ರಯ, ಗುರುತು, ಪರಿಣಾಮ, ಕೊನೆ, ಯಾತ್ರೆ, ಲೋಕಜ್ಞಾನ. ಈ ಅರ್ಥಗಳನ್ನೆಲ್ಲಾ ಗಮನಿಸಿದರೆ ಇವೆಲ್ಲವೂ ವ್ಯಾವಹಾರಿಕ ಪ್ರಪಂಚದ ಅರ್ಥಗಳನ್ನು ನಮಗೆ ವಿವರಿಸುತ್ತವೆ. ನಾವು ಈ ಮಾತನ್ನು 'ಲೋಕಾರ್ಥ' ಎಂಬ ಮಾತಿನಿಂದ ಗ್ರಹಿಸಬಹುದು. ಇನ್ನು 'ಸುಗತಿ' ಎಂಬುದಕ್ಕೆ ಚೆನ್ನಾಗಿ ನಡೆಯುವವನು, ಸದ್ಗತಿ ಅಥವ ಮೋಕ್ಷ ಎಂಬ ಎರಡೇ ಅರ್ಥಗಳಿವೆ. ನಾವು ಇದನ್ನು 'ಆಲೋಕಾರ್ಥ' ಎಂಬ ಮಾತಿನಿಂದ ಗ್ರಹಿಸಬಹುದು.

'ಗತಿ' ಎಂಬುದು ಈ ಲೋಕದ ಚಹರೆಗಳನ್ನು ಪ್ರತಿಮಿಸುತ್ತಿದ್ದರೆ; 'ಸುಗತಿ' ಎಂಬುದು ಆಲೋಕಾರ್ಥದ ಚಹರೆಯನ್ನು ಸಂಕೇತಿಸುತ್ತದೆ. ಲೋಕವ್ಯವಹಾರದಲ್ಲಿ ನಾನಾ ಗತಿಗಳುಂಟು. ಇದು ವ್ಯಕ್ತಿಯ ನಡವಳಿಕೆಗೆ ಸಂಬಂಧಿಸುವುದರ ಜತೆಗೆ ಸಮುದಾಯಗಳ ರೀತಿ–ರಿವಾಜುಗಳನ್ನು ಪ್ರತ್ಯಕ್ಷವಾಗಿ ಸೂಚಿಸುತ್ತದೆ. ಆದರೆ, ಸುಗತಿ ಎಂಬಲ್ಲಿ ಪೂರ್ವಕ್ಕೆ 'ಸು' ಎಂಬ ಉಪಸರ್ಗ ಸೇರಿದ ತಕ್ಷಣವೇ ಅರ್ಥದ ಸಂಕೇತವೇ ಬದಲಾಗುತ್ತದೆ. ಕುವೆಂಪು ಅವರು 'ಶ್ರೀರಾಮಾಯಣ ದರ್ಶನಂ' ಮಹಾಕಾವ್ಯದ ಒಂದು ಸಂಚಿಕೆಗೆ 'ದೂರಮಿರದಿನ್ ಸುಗತಿ' ಎಂಬ ಶೀರ್ಷಿಕೆಯನ್ನು ಕೊಟ್ಟಿದ್ದಾರೆ. ನಾವು ಈ ಸಂಚಿಕೆಯಲ್ಲಿ ಬರುವ ವಿವರಗಳೊಂದಿಗೆ 'ಸುಗತಿ'ಯ ನೆಲೆಯನ್ನು ಅರ್ಥಮಾಡಿಕೊಳ್ಳೋಣ.

ಸೀತೆಯು ಅಶೋಕವನದಲ್ಲಿದ್ದಾಳೆ. ಆಕೆಯನ್ನು ನೋಡಿಕೊಳ್ಳುತ್ತಿರುವ 'ತ್ರಿಜಟೆ'ಯೂ ಸೀತೆಯ ಬಳಿ ಇದ್ದಾಳೆ. ದೂರದಲ್ಲಿ 'ಹೊಗೆ' ಎದ್ದೇಳುತ್ತಿರುವುದು ಮಾತ್ರ ಸೀತೆಗೆ ಕಾಣಿಸುತ್ತದೆ. ಆಗ ಸೀತೆ ತ್ರಿಜಟೆಗೆ ಇದೇನೆಂದು ಕೇಳುತ್ತಾಳೆ. ಆಗ ತ್ರಿಜಟೆಯು ನಿನ್ನೆ ದಿನ ಭಯಂಕರ ಕಾಳಗವಾಯಿತು. ಕುಂಭಕರ್ಣನು ರಾಮನ ಸೈನ್ಯದ ಮೇಲೆ ಏರಿಹೋದ. ಆಗ ವಾನರರ ಸೇನೆ ಚೆಲ್ಲಾಪಿಲ್ಲಿ ಆಯಿತು. ಆದರೆ, ಕಪಿಸೈನ್ಯ ಹೆದರದೆ ಕುಂಭಕರ್ಣನ ಮೇಲೆ ಚಿತ್ರ–ವಿಚಿತ್ರ ರೀತಿಯಲ್ಲಿ ದಾಳಿ ಮಾಡಿತು. ಕುಂಭಕರ್ಣನು ರಾವಣಸೈನ್ಯವನ್ನು ಒಗ್ಗೂಡಿಸಿ–ಅಚಲನಾಗಿ ಕಾದಿದ. ಆದರೆ, ಕೊನೆಗೆ ಮೃತ್ಯುವಶನಾದನೆಂದೂ ಅವನ ದೇಹ ಮತ್ತು ಅಳಿದ ಸೈನ್ಯದ ದೇಹಗಳನ್ನು ಈ ಸಂಜೆ ಸುಡುತ್ತಿರುವರೆಂದೂ ತ್ರಿಜಟೆ ತಿಳಿಸುತ್ತಾಳೆ. ಆಗ ಸೀತೆ ಮೌನವಾಗುತ್ತಾಳೆ. ಆಕೆಯ ಕಣ್ಣಂಚಿನಲ್ಲಿ ನೀರು ಕಾಣಿಸಿಕೊಳ್ಳುತ್ತದೆ. ತನ್ನೊಬ್ಬಳ ಸಂರಕ್ಷಣೆಗಾಗಿ ಎರಡೂ ಕಡೆಯವರ ಸಾವು ನೋವುಗಳಿಂದ ತಾನು ನೊಂದಿರುವುದಾಗಿ ತ್ರಿಜಟೆಗೆ ಉಸುರುತ್ತಾಳೆ. ಅಷ್ಟರಲ್ಲಿ ಅನಲೆ ಬಂದು ದುಃಖದ ಕೋಡಿಯನ್ನೇ ಹರಸುತ್ತಾಳೆ. ದೊಡ್ಡಪ್ಪ ಕುಂಭಕರ್ಣನ ಸಾವಿನ ಗತಿಯನ್ನು ನೆನೆನೆನೆದು ದುಃಖಿಸುತ್ತಾಳೆ. ಕುಂಭಕರ್ಣನು ಅನಲೆಯನ್ನು ಚಿಕ್ಕಂದಿನಲ್ಲಿ ಎತ್ತಿಕೊಂಡು ಆಡಿಸಿದ ಬಗೆಯನ್ನು ಹೇಳುತ್ತ ಹಲುಬುತ್ತಾಳೆ. ಆಗ ಸೀತೆ ಅನಲೆಯನ್ನು ಬಾಚಿ ತನ್ನ ತೊಡೆಯ ಮೇಲೆ ಇರಿಸಿಕೊಂಡು ಸಂತವಿಸುವಳು. ತಾನು ಚಿಕ್ಕವಳಿರುವಾಗ ಎತ್ತಿಕೊಂಡು 'ಇದೊಂದು ಹೂವಿನ ಚೆಂಡು' ಎಂದು ಹೇಳುತ್ತಲೇ ಮೇಲಕ್ಕೆಸೆದು ತೋಳಲ್ಲಿ ಆತುಕೊಂಡಿದ್ದನ್ನೂ ಕುಂಭಕರ್ಣನ ಮಗುತನವನ್ನೂ ಅನಲೆ ನೆನೆದುಕೊಳ್ಳುತ್ತಾಳೆ. ನಾಳೆಯ ದಿನ ಮರಳಿ ಯುದ್ಧ ನಡೆಯುವುದೆಂದೂ ಇಂದ್ರಜಿತು ಯುದ್ಧಕ್ಕೆ ಸಿದ್ಧಗೊಳುತ್ತಿರುವನೆಂದೂ ಅನಲೆ ಸೀತೆಗೆ ತಿಳಿಸುತ್ತಾಳೆ.

ಆಗ ಸೀತೆಯು ಚಣಕಾಲ ಮೌನವಾಗಿ ಶ್ರೀರಾಮನನ್ನೂ ಕಪಿಸೈನ್ಯವನ್ನೂ ನೆನಪಿಸಿಕೊಳ್ಳುವಳು. ಇಂದ್ರಜಿತು ನಾಳೆ ನಡೆಸುವ ಯುದ್ಧದ ಭೀಕರತೆಯನ್ನು ನೆನಪಿಸಿಕೊಂಡಾಗ ಸೀತೆಯ ಬಗೆ ಬೆದರುತ್ತದೆ. ಆಗ ಅವಳ ಸಮೀಪದಲ್ಲಿ ತ್ರಿಜಟೆ ಮತ್ತು ಅನಲೆ ಇದ್ದರು. ಆಗ ಸೀತೆಯು 'ದೂರಮಿರದಿನ್ ಸುಗತಿ' ಎಂದು ಮನಸ್ಸಿನಲ್ಲಿ ಅಂದುಕೊಳ್ಳುತ್ತಾಳೆ. ಇದು 'ಸುಗತಿ'ಯ ಸಂದರ್ಭ. ಕುಂಭಕರ್ಣ ಮರಣಹೊಂದಿದ್ದಾನೆ. ನಾಳೆಯ ದಿನ 'ಇಂದ್ರಜಿತು' ಮರಣಕ್ಕೆ ಸಿದ್ಧನಾಗುತ್ತಿದ್ದಾನೆ. ಈ ರಹಸ್ಯವು 'ಸುಗತಿ' ಎಂಬ ಮಾತಿನಿಂದ ಧ್ವನಿತವಾಗುತ್ತಿದೆ.

ನಮ್ಮ ವ್ಯಾವಹಾರಿಕ ಸತ್ತೆಯು ಕೇವಲ 'ಗತಿಭೇದ'ಗಳನ್ನು ಮಾತ್ರ ಆವರಿಸಿಕೊಂಡಿದೆ. ಗತಿಯು ಮೂರ್ತವಾದುದು. ಅದು ನಮ್ಮ ಇಂದ್ರಿಯಗಳ ಪ್ರಪಂಚಕ್ಕೆ ಮಾತ್ರ ಸೇರಿದ್ದು. ಹಾಗಾಗಿ, 'ಗತಿ'ಯು ಭೌತಿಕಪ್ರಪಂಚಕ್ಕೆ ಸೇರಿದ್ದೆಂಬುದು ನಿಶ್ಚಿತ. ನಮ್ಮ ಲೋಕದ ಪಡಿಪಾಟಲುಗಳನ್ನು 'ಗತಿ'ಯು ವಿವರಿಸುತ್ತದೆ. ಆದರೆ, ಸುಗತಿಯು ಗತಿಪ್ರಪಂಚದ ಆಚೆಕಡೆಯ ಅಮೂರ್ತ ನೆಲೆಯನ್ನು ಪರೋಕ್ಷವಾಗಿ ಪ್ರತಿಮಿಸುತ್ತದೆ.

ಸೀತೆಯು ಅಶೋಕವನದಲ್ಲಿದ್ದು ಇತ್ತ 'ಗತಿ' ಪ್ರಪಂಚದ ಪಡಿಪಾಟಲುಗಳನ್ನು ದುಃಖಪ್ರಸಂಗಗಳ ಅನೂಹ್ಯವನ್ನೂ ಕಂಡಿದ್ದಾಳೆ. ಅವಳ ಒಳಗಣ್ಣು ಗತಿಯಿಂದ ಹೊರಚಾಚಿ 'ಸುಗತಿ'ಯ ನೆಲೆಯನ್ನು ಹುಡುಕುತ್ತಿರುವ ವೇಳೆಯಲ್ಲಿ 'ದೂರಮಿರದು ಇನ್ ಸುಗತಿ' ಎಂದು ಅಂದುಕೊಳ್ಳುತ್ತಿದ್ದಾಳೆ. ಮನುಷ್ಯನ ಬದುಕು ಗತಿಯ ಆವರ್ತಗಳಲ್ಲಿ ಸಿಕ್ಕಿಹಾಕಿಕೊಂಡಿದೆ. ಜೀವನದ ಸಂಕೀರ್ಣ ಸ್ಥಿತಿಗಳು 'ಗತಿ' ಪ್ರಪಂಚದಲ್ಲಿ ತಿಳಿಯಲು ಸಾಧ್ಯವಿಲ್ಲ. ಅದಕ್ಕೆ ಬೇರೊಂದು ಆವರಣವೇ ಬೇಕು. ಸೀತೆಯು ಅಶೋಕವನದಲ್ಲಿದ್ದು ಎಲ್ಲರಿಗೂ 'ಸದ್ಗತಿ'ಯನ್ನು ಕ್ಷೇಮಂಕರವಾಗಿ ಬಯಸುತ್ತಿದ್ದಾಳೆ. ಜೀವನದ ಆತ್ಯಂತಿಕ ಸುಖ ಇರುವುದೇ 'ಸುಗತಿ'ಯಲ್ಲಿ. ಸಂಸ್ಕೃತದ ಸುಭಾಷಿತವೊಂದು 'ವಿನಾ ದೈನ್ಯೇನ ಜೀವಿತಂ' ಎಂದು ಹೇಳುತ್ತದೆ. ನಮ್ಮ ಸಂಸಾರದ ಗತಿಯಲ್ಲಿ ದೈನ್ಯದಿಂದ ಬದುಕುವುದು ಬೇಡ. ಸುಖದ ಸಾವು ಮಾತ್ರ ಸಾಕೆಂದು ಮನುಷ್ಯಜೀವಿ ಬಯಸುತ್ತದೆ. ಕುವೆಂಪು ಚಿತ್ರಿಸಿರುವ ಈ ಭಾಗ – 'ಸುಖದ ಲೌಕಿಕ ನೆಲೆಯನ್ನು ಹೇಳುವುದರೊಂದಿಗೆ ಎಲ್ಲರಿಗೂ 'ಸದ್ಗತಿ' ದೊರಕಲೆಂದು ಆಶಿಸುತ್ತದೆ! ಜೀವಿತದ ನೆಲೆಯು 'ಗತಿ'ಯಲ್ಲಿ ಕೀಲಿಸಿಕೊಂಡಿದ್ದರೆ; ಜೀವನವು 'ಸುಗತಿ'ಯ ನೆಲೆಯಲ್ಲಿ ಕೀಲಿಸಿಕೊಂಡು ಸಂಬಂಧಗಳ ನೆಲೆಯನ್ನು ಅನ್ವೇಷಿಸುತ್ತದೆ.

■ ಪುರಂಜೀವಿ

## ಮಾತೇ ಮುತ್ತು

- ಉಪದೇಶ ಮಾಡುವವನ ದೋಷ ತಕ್ಷಣ ನಮ್ಮನ್ನು ಆಕರ್ಷಿಸುತ್ತದೆ.
  –ಲೂಥರ್
- ದಿನದಲ್ಲಿ ಒಮ್ಮೆಯಾದರೂ ನಿಮ್ಮೊಂದಿಗೆ ಮಾತನಾಡಿ. ಇಲ್ಲವಾದಲ್ಲಿ ವಿಶ್ವದ ಅತ್ಯುತ್ತಮ ವ್ಯಕ್ತಿಯನ್ನು ಭೇಟಿಯಾಗುವ ಅವಕಾಶದಿಂದ ವಂಚಿತರಾಗುತ್ತೀರಿ.
  –ಸ್ವಾಮಿವಿವೇಕಾನಂದ
- ಕಪ್ಪು ಬಣ್ಣವು ಭಾವನಾತ್ಮಕವಾಗಿ ಕೆಟ್ಟದು. ಆದರೆ ಪ್ರತಿಯೊಂದು ಕಪ್ಪು ಬೋರ್ಡ್ ವಿದ್ಯಾರ್ಥಿಯ ಜೀವನವನ್ನು ಪ್ರಕಾಶಮಾನಗೊಳಿಸುತ್ತದೆ.
  –ಎ.ಪಿ.ಜೆ. ಅಬ್ದುಲ್ ಕಲಾಂ
- ಹಿಂಸೆ ಎಂದಿಗೂ ನಮ್ಮ ಗುರಿಯನ್ನು ಸಾಧಿಸಲಾರದು.
  –ಗಾಂಧೀಜಿ
- ಉನ್ನತಿಯ ದಾರಿಯಲ್ಲಿ ಸಭ್ಯತೆಯ ಅಗತ್ಯ ಹೆಚ್ಚು ಇರುತ್ತದೆ.
  –ಯಂಗ್
- ಬಡವನಿಗೆ ಕನಸುಗಳೇ ಗತಿ.
  –ಯೇಟ್ಸ್
- ಯಶಸ್ಸಿನ ಗುಟ್ಟು ಏನು ಗೊತ್ತೆ? ಹಿಡಿದ ಕೆಲಸವನ್ನು ಬಿಡದಿರುವುದು.
  –ಗ್ಲೇಡರ್